# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **390**

ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 10-12-2025

| | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿಯನ್ನು ಸ್ಥಾಪಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು: | ಸಾರಿಗೆ ಇಲಾಖೆಯಲ್ಲಿ ಹೊಸದಾಗಿ ಪ್ರಾದೇಶಿಕ ಸಾರಿಗೆ ಕಛೇರಿಯನ್ನು ಸ್ಥಾಪಿಸಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಕಂಡಂತಿವೆ.<br><br>1) ಪ್ರಸ್ತಾಪಿತ ಉಪವಿಭಾಗ / ತಾಲ್ಲೂಕು ಕೇಂದ್ರಕ್ಕೆ ಒಳಪಡುವ ವ್ಯಾಪ್ತಿಯಲ್ಲಿ ಈಗಾಗಲೇ ನೋಂದಣಿಯಾಗಿ ಉಪಯೋಗದಲ್ಲಿರುವ ಎಲ್ಲಾ ವರ್ಗಗಳ ವಾಹನಗಳಿಂದ ಕನಿಷ್ಠ ರೂ.20 ಕೋಟಿ ರಾಜಸ್ವ ವಸೂಲಾಗುತ್ತಿರಬೇಕು.<br><br>2) ಪ್ರಸ್ತಾಪಿತ ಕಛೇರಿ ವ್ಯಾಪ್ತಿಯಲ್ಲಿ ಹೊಸದಾಗಿ ವಾರ್ಷಿಕ ಸರಾಸರಿ 30,000 ವಾಹನಗಳು ನೋಂದಣಿಯಾಗಿರಬೇಕು.<br><br>3) ಪ್ರಸ್ತಾಪಿತ ಕಛೇರಿ ವ್ಯಾಪ್ತಿಯಲ್ಲಿ ಕನಿಷ್ಠ 10,000 ಚಾಲನಾ ಲೈಸೆನ್ಸ್‌ಗಳ ನೀಡಿಕೆಯಾಗಿರಬೇಕು.<br><br>4) ಆ ಭಾಗದಲ್ಲಿ ವಾರ್ಷಿಕ ಸರಾಸರಿ 10,000 ವಾಹನಗಳು ನೋಂದಣಿಯಾಗಿರಬೇಕು.<br><br>5) ಪ್ರಸ್ತಾಪಿತ ಕಛೇರಿಯು ಮೂಲ ಕಛೇರಿಯಿಂದ ಗ್ರಾಮೀಣ ಭಾಗಗಳಿಗೆ 50 ಕಿ. ಮೀ. ಅಂತರದಲ್ಲಿರಬೇಕು. |
| ಆ. | ಸಿಂಧನೂರು ತಾಲ್ಲೂಕು ರಾಯಚೂರು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕಾಗಿದ್ದು, ಜಿಲ್ಲೆಯ ಒಟ್ಟು ವಾಹನಗಳ ನೋಂದಣಿಯಲ್ಲಿ ಅತೀ ಹೆಚ್ಚು ಕೊಡುಗೆ ಸಿಂಧನೂರು ತಾಲ್ಲೂಕಿನದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಯಚೂರು ಜಿಲ್ಲೆಯಲ್ಲಿ ರಾಯಚೂರು ತಾಲ್ಲೂಕು ವಾಹನಗಳ ನೋಂದಣಿಯಲ್ಲಿ 1ನೇ ಸ್ಥಾನದಲ್ಲಿದ್ದು, ಸಿಂಧನೂರು ತಾಲ್ಲೂಕು 2ನೇ ಸ್ಥಾನದಲ್ಲಿರುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| ಇ. | ಬಂದಿದ್ದಲ್ಲಿ, ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಆಯುಕ್ತರ ಕಛೇರಿಯನ್ನು ಸ್ಥಾಪಿಸುವ ಕುರಿತು ಸರ್ಕಾರಕ್ಕೆ ಪೂರೈಕೆಯಾಗದಿರುವ ಮಾನದಂಡಗಳೇನು: | ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ಪ್ರಾರಂಭಿಸುವ ಎಲ್ಲಾ ಮಾನದಂಡಗಳನ್ನು ಪೂರೈಸಿರುತ್ತದೆ ಆದರೆ, ದಿನಾಂಕ:01.11.2021 ರಿಂದ ಸಾರಿಗೆ ಇಲಾಖೆಯಲ್ಲಿ **ಒಟ್ಟು 52** ಸೇವೆಗಳನ್ನು ಆನ್‌ಲೈನ್ ಮೂಲಕ ಹಾಗೂ ಅದರಲ್ಲಿ **24** ಸೇವೆಗಳನ್ನು ಸಂಪರ್ಕರಹಿತ ಸೇವೆಗಳಾಗಿ ನಿರ್ವಹಿಸಲು ಅನುಷ್ಠಾನಗೊಳಿಸಲಾಗಿದ್ದು, ಸಾರ್ವಜನಿಕರು ಕಚೇರಿಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.<br><br>ಸಾರ್ವಜನಿಕರಿಗೆ ಅವರುಗಳ ವಾಹನ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಯ ಸ್ಮಾರ್ಟ್ ಕಾರ್ಡ್‌ಗಳನ್ನು ಅವರ ಮನೆಯ ವಿಳಾಸಗಳಿಗೆ ಅಂಚೆ ಸೇವೆಯ ಮೂಲಕ ತಲುಪಿಸಲಾಗುತ್ತಿದೆ. ಇಲಾಖೆಯಲ್ಲಿ ವಾಹನ್-4, ಸಾರಥಿ-4 ಮತ್ತು ಇ-ಪೇಮೆಂಟ್ ಆಫ್ ಟ್ಯಾಕ್ಸ್ ತಂತ್ರಾಂಶಗಳ ಮೂಲಕ ಇಲಾಖೆಯ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ ಹಾಗೂ ಸಾರ್ವಜನಿಕರು ಕರ್ನಾಟಕ-1, ಬೆಂಗಳೂರು-1 ಮತ್ತು ಮೊಬೈಲ್-1 ಎಂಬ ಆ್ಯಪ್‌ಗಳಲ್ಲಿ ವಾಹನ ವಿವರ / ಮಾಹಿತಿಗಳನ್ನು ಪಡೆಯ ಬಹುದಾಗಿರುತ್ತದೆ.<br><br>ಸಿಂಧನೂರು ತಾಲ್ಲೂಕಿನ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರತಿ ಮಾಹೆಯ ಕೊನೆಯ ಗುರುವಾರದಂದು ಸಾರಿಗೆ ಶಿಬಿರವನ್ನು ನಡೆಸಲಾಗುತ್ತಿದೆ.<br><br>ಈ ಹಿನ್ನೆಲೆಯಲ್ಲಿ ಪ್ರಸ್ತುತ ಹೊಸ ಕಛೇರಿಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಈ. | ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಆಯುಕ್ತರ ಕಛೇರಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಹಂತದಲ್ಲಿದೆ? | |

**ಟಿಡಿ 83 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು